## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 450/2024

ಸಾಕ್ಷಿಗೆ ದಿನಾಂಕ 06-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | ಃ | ಕುಂಬಾರ ರವಿಕುಮಾರ್ |
| ತಂದೆಯ ಹೆಸರು | ಃ | ಮಹಾಲಿಂಗಪ್ಪ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ಹೆಚ್ ಸಿ |
| ವಾಸ ಸ್ಥಳ | ಃ | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 21-06-2022 ರಿಂದ ನಾನು ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 06-03-2024 ರಂದು ಸಂಜೆ 4 ಗಂಟೆ ಸಮಯದಲ್ಲಿ ನನಗೆ ನೇಮಿಸಿರುವಂತಹ ಗ್ರಾಮಗಳ ಪೈಕಿ ಹೊಸಕೇರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾ ಶಾಲೆಯ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಒಬ್ಬ ವ್ಯಕ್ತಿ ಮಟಕಾ ದಂಧೆಯಲ್ಲಿ ತೊಡಗಿರುವ ಬಗ್ಗೆ ನನಗೆ ಮಾಹಿತಿ ಬಂದಿದ್ದು ಅದನ್ನು ನಾನು ಚಾಸಾ-1 ರವರಿಗೆ ತಿಳಿಸಿರುತ್ತೇನೆ. ಚಾಸಾ-1 ರವರು ನಮ್ಮ ಠಾಣಾ ಸಿಬ್ಬಂದಿಗಳಾದ ನಮ್ಮ ಠಾಣಾ ಸಿಬ್ಬಂದಿ ಮಹಾಂತೇಶ ಮತ್ತು ಮಂಜುನಾಥ ಇವರಿಗೆ ದಾಳಿಗೆ ಬರಲು ಕೇಳಿಕೊಂಡಿದ್ದು ಇರುತ್ತದೆ. ನಂತರ ನ್ಯಾಯಾಲಯದ ಅನುಮತಿ ಕೋರಿ ಪತ್ರವನ್ನು ಕಳುಹಿಸಲಾಯಿತು. ಸಂಜೆ 4.40 ಗಂಟೆ ಸಮಯಕ್ಕೆ ನಮ್ಮ ಠಾಣೆಯ ವಾಹನದಲ್ಲಿ ವಾಹನ ಚಾಲಕ ಬಸವರಾಜ ಚಾಸಾ-7, ನಾನು, ಚಾಸಾ-1 ಮತ್ತು ನಮ್ಮ ಸಿಬ್ಬಂದಿಯಾದ ಚಾಸಾ-5 ಮತ್ತು 6 ರವರು ಸೇರಿ ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ನಾವು ಸಂಜೆ 5.15 ಗಂಟೆ ಸಮಯದಲ್ಲಿ ಹೊಸಕೇರಿ ಗ್ರಾಮದ ಹೊರವಲಯದಲ್ಲಿ ವಾಹನವನ್ನು ನಿಲ್ಲಿಸಿರುತ್ತೇವೆ. ಚಾಸಾ-1 ರವರು ಇಬ್ಬರು ಪಂಚರನ್ನು ಕರೆತರಲು ನನಗೆ ಸೂಚಿಸಿದರು. ಅದರಂತೆ ನಾನು ಪಂಚರಾದ ಚಾಸಾ-2 ಮತ್ತು 3 ರವರನ್ನು ಚಾಸಾ-1 ರವರ ಮುಂದೆ ಸಂಜೆ 5.25 ಗಂಟೆ ಸಮಯದಲ್ಲಿ ಹಾಜರುಪಡಿಸಿರುತ್ತೇನೆ. ನಂತರ ನಾವೆಲ್ಲರೂ ಸೇರಿ ನಮ್ಮ ಇಲಾಖಾ ವಾಹನದಲ್ಲಿ ಹೊಸಕೇರಿ ಗ್ರಾಮದ ಸರ್ಕಾರಿ ಹಿ ಪ್ರಾ ಶಾಲೆಯಿಂದ ಸ್ವಲ್ಪ ಅಂತರದಲ್ಲಿ ವಾಹನವನ್ನು ನಿಲ್ಲಿಸಿ ನೋಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಮಟಕಾ ಚೀಟಿ ಬರೆಸಿದ ಅಂಕಿ ಬಂದಲ್ಲಿ ರೂ.1 ಕ್ಕೆ ರೂ.80/- ಹಣವನ್ನು

ಕೊಡುತ್ತೇನಂತಾ ಹೇಳಿ ಸಾರ್ವಜನಿಕರಿಂದ ಹಣವನ್ನು ಪಡೆದು ಮಟಕಾ ಚೀಟಿಯನ್ನು ಬರೆದುಕೊಡುತ್ತಿದ್ಧ ನಾವು ಆಗ ಆರೋಪಿ ಮೇಲೆ ದಾಳಿ ಮಾಡಿ ಅವನನ್ನು ಹಿಡಿದುಕೊಂಡಿರುತ್ತೇವೆ ಆಗ ಸಮಯ ಸಂಜೆ 5.35 ಗಂಟೆಯಾಗಿತ್ತು. ಆರೋಪಿಯ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆತನ ಹೆಸರು ಚಿಲಕನಹಟ್ಟಿ ವೀರಣ್ಣ ಬಿನ್ ಮರುಳಸಿದ್ದಪ್ಪ ಅಂತಾ ತಿಳಿಸಿದನು. ಆರೋಪಿತನ ಅಂಗಶೋಧನೆಯನ್ನು ನಡೆಸಲಾಗಿ ಅವನ ಬಳಿಯಿಂದ ಒಂದು ಮಟಕಾ ಪಟ್ಟಿ, ಪೆನ್ನು ಮತ್ತು ನಗದು ರೂ.1050/-ನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಪಂಚನಾಮೆಯನ್ನು ಸಂಜೆ 5.35 ರಿಂದ 6.15 ಗಂಟೆವರೆಗೆ ಜರುಗಿಸಲಾಯಿತು. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆರೋಪಿ ನ್ಯಾಯಾಲಯದ ಮುಂದೆ ಹಾಜರು ಇರುತ್ತಾನೆ. ನಾನು ಮು ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ ಈಗಾಗಲೇ ಮು ಮಾ-1 ರಿಂದ 3 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು. ಆರೋಪಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಈ ಪ್ರಕರಣದಲ್ಲಿ ಚಾಸಾ-1 ನಮ್ಮ ಹಿರಿಯ ಅಧಿಕಾರಿ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ಚಾಸಾ-1 ರವರು ನೀಡಿರುವಂತಹ ನಿರ್ದೇಶನವನ್ನು ನಾನು ಪಾಲಿಸುತ್ತೇನೆಂದರೆ ಸರಿ. ಹೊಸಕೇರಿ ಗ್ರಾಮಕ್ಕೆ ಹೋಗಲು 2 ದಾರಿ ಇವೆ ನಾು ಶಿವಪುರ ಮಾರ್ಗವಾಗಿ ಹೊಸಕೇರಿ ಗ್ರಾಮಕ್ಕೆ ಹೋಗಿರುತ್ತೇವೆ. ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತೇವೆ. ದಾಳಿ ಮಾಡಿದ ತಕ್ಷಣದಿಂದಲೇ ಪಂಚನಾಮೆಯನ್ನು ಬರೆಯಲು ಪ್ರಾರಂಭಿಸಿರುತ್ತೇವೆ. ನಾವು ಆರೋಪಿಯನ್ನು ಹಿಡಿಯುವಷ್ಟರಲ್ಲಿ ಅಲ್ಲಿದ್ದ ಸಾರ್ವಜನಿಕರು ಓಡಿಹೋಗಿರುತ್ತಾರೆ. ನಾವು ಯಾವುದೇ ರೀತಿಯಿಂದ ದಾಳಿ ಮಾಡಿಲ್ಲ, ಆರೋಪಿಯಿಂದ ಯಾವುದೇ ಮು ಮಾಲುಗಳನ್ನು ಅಮಾನತುಪಡಿಸಿಕೊಂಡಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆರೋಪಿಗೂ ಮು ಮಾಲಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆ ಸಲುವಾಗಿ ಮು ಮಾಲುಗಳನ್ನು ಸೃಷ್ಟಿಸಿಕೊಂಡು ಆರೊಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ